ವಿಜಯ ಕರ್ನಾಟಕ

# ಕನ್ನಡದಲ್ಲೇ ಆಲೋಚಿಸಿ

**ಬೆಂಗಳೂರು:** ಪ್ರತಿಯೊಬ್ಬರು ಕನ್ನಡ ದಲ್ಲೇ ಆಲೋಚಿಸುವುದನ್ನು ರೂಢಿಸಿ ಕೊಂಡಾಗ ಮಾತ್ರ ಭಾಷೆ ವ್ಯಾಪಕವಾಗಿ ಬೆಳೆಯಲು ಸಾಧ್ಯ ಎಂದು ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

ನಗರದ ವಿಶ್ವೇಶ್ವರಪುರದಲ್ಲಿರುವ ಭಗವಾನ್ ಮಹಾವೀರ ಜೈನ್ ಕಾಲೇಜಿನಲ್ಲಿ ಶನಿವಾರ ಏರ್ಪಡಿ ಸಲಾಗಿದ್ದ ಕನ್ನಡದ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

''ಭಾರತದಲ್ಲಿ ತತ್ತ್ವಜ್ಞಾನ ಹಾಗೂ ಸಾಹಿತ್ಯ ಕ್ಷೇತ್ರ ಶ್ರೀಮಂತವಾಗಿದ್ದು, ಪ್ರಪಂಚದ ಬೇರೆ ಯಾವುದೇ ದೇಶದಲ್ಲಿ ಇಷ್ಟು ಅಗಾಧವಾಗಿಲ್ಲ. ಭಾರತದ ಪರಂಪರೆಯಲ್ಲಿರುವಷ್ಟು ಜಾನಪದ ಕತೆಗಳು, ರೂಪಕಗಳು ಬೇರೆ ಯಾವುದೇ ರಾಷ್ಟ್ರಗಳಲ್ಲಿ ಕಾಣಸಿಗು ವುದಿಲ್ಲ. ಹಾಗಾಗಿ ಮಕ್ಕಳಿಗೆ ಕತೆ ಹೇಳುವ ಸಂಪ್ರದಾಯ ಮುಂದುವರಿಯಬೇಕು,'' ಎಂ ದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್.ನಟರಾಜ್, ಜೈನ್ ಶಿಕ್ಷಣ ಸಂಸ್ಥೆಗಳ ನಿರ್ದೇಶಕ (ಪಿ.ಯು. ಪ್ರೋಗ್ರಾಮ್ಸ್) ಡಾ.ಬಿ.ಟಿ.ವೆಂಕಟೇಶ್ ಉಪಸ್ಥಿತರಿದ್ದರು.